ಸಿದ್ಧನಾಗೇ ಬಂದಿದ್ದ. ಅವನ ತುತ್ತೂರಿ ನಾದದ ಹಿಂದೆ ಭಾರಿ ರಖಂ ವಸೂಲು ಮಾಡುವ ಇರಾದೆ ಇತ್ತು. ನಮ್ಮ ಸಂಕಷ್ಟದ ಪೂರಾ ಲಾಭ ಎತ್ತಲು ಆತ ತಯಾರಾಗಿ ಬಂದಿದ್ದ.

ಅವನ ಮಾತಿಗೆ ಉತ್ತರ ಕೊಡುವ ಬದಲು ಜೇಬಲ್ಲಿದ್ದ ಇನ್ನೂರು ರೂಪಾಯಿ ತೆಗೆದು ಕೊಟ್ಟೆ. ಅದನ್ನು ಕ್ಷುಲಕವಾಗಿ ನೋಡಿ, "ಥುತ್... ನಿಮ್ದು ಮಗೂದು ಜೀವದ ಬೆಲೆ ಬರೀ ಇನ್ನೂರು ರೂಪಾಯಿ" ಎಂದ. ನನಗೆ ಸಿಟ್ಟು ಬಂತು. ಉಪಕಾರ ಮಾಡಿದ್ದಾನೆ ಆತ; ಏನು ಮಾತಾಡಿದರೂ ಸಹಿಸಿಕೊಳ್ಳಬೇಕು ಎಂದು ಅವುಡು ಗಚ್ಚಿದೆ. ಸುತ್ತ ಸೇರಿದ್ದ ನ್ಯಾಯಸ್ಥರಲ್ಲಿ ಕೆಲವರು, "ಏಯ್ ಅದೆಷ್ಟು ಮಾತಾಡ್ತೀಯ. ಕೊಟ್ಟಷ್ಟು ತೊಗೊಂಡ್ ಹೋಗು. ಗಾಂಚಾಲಿ ಮಾಡ್ಬೇಡ" ಎಂದು ದಬಾಯಿಸಿದರು. ಅವನು ಜಪ್ಪಯ್ಯ ಎನ್ನದೆ ಹಟಕ್ಕೆ ನಿಂತಿದ್ದ. ಇದೇ ತಕ್ಕ ಸಮಯ, ಸಿಕ್ಕಷ್ಟು ಜಬ್ಬಿಕೊಳ್ಳಬೇಕೆಂಬ ಇರಾದೆ ಅವನಿಗಿತ್ತು. ಈ ಜಗಳ ನೋಡುತ್ತಿದ್ದ ಮಾವನವರಿಗೆ ಆವೇಶ ಉಕ್ಕಿ, "ನನ್ನ ಮೊಮ್ಮಗು ಮೇಲಿನ ಸದಖ ತಗೋ" ಎಂದು ಎಣಿಸದೆ ಅದೆಷ್ಟೋ ದುಡ್ಡು ಕೊಟ್ಟರು. ವ್ಯಗ್ರ ಮುಖದ ಆ ಆಟೋ ಡ್ರೈವರ್ ಕೈಲಿದ್ದ ಅಷ್ಟೂ ರೊಕ್ಕವನ್ನು ನನ್ನ ಮಗಳ ಮಡಿಲಿಗೆ ತಂದು ಹಾಕಿ "ಅಚ್ಚಿ ಜೀಯೋ ಮೇರಿ ಬಚ್ಚಿ" ಎಂದು ತಲೆ ಸವರಿ ಸಂತನಂತೆ ಹೊರಟು ಹೋದನು. ನಾವೆಲ್ಲರೂ ಅವಾಕ್ಕಾಗಿ ನಿಂತೆವು.

ಜನರೆಲ್ಲಾ ಚದರುವ ಮುನ್ನ ಮಕ್ಕಳಿಂದ ಹಿಡಿದು ವೃದ್ಧರ ತನಕ ಎಲ್ಲರೂ ನನಗೆ ಗೀತೋಪದೇಶ ಮಾಡಿದರು. ಈ ಪ್ರಮಾಣದಲ್ಲಿ ಉಗಿಸಿ, ನಿಂದಿಸಿ, ಜರಿಸಿಕೊಂಡು ಅಭ್ಯಾಸವಿಲ್ಲದೆ ಪೂರಾ ಪಂಚರ್ ಆಗಿದ್ದೆ. ಮನೆಗೆ ಬಂದ ಮೇಲೂ ಕೆಂಡದ ಕಣ್ಣು ಮಾಡಿಕೊಂಡಿದ್ದ ಹೆಂಡತಿ ಅಪರಾಧಿಯಂತೆ ನನ್ನ ನಿಲ್ಲಿಸಿ ಮಗುವಿಗೆ, "ಈಗ ಏನಾಯಿತು ಹೇಳು" ಎಂದಳು. ಅವಳು ತೊದಲುತ್ತಾ ಘಟನೆಗಳನ್ನು ಹಿಂದೆಮುಂದೆ ಮಾಡಿ ಹೇಳಿದಳು. ಅದನ್ನು ಕೂಡಿಸಿ ಹೇಳುವುದಾದರೆ ನಾನು ಆಕೆಯನ್ನು ಮೈದಾನದಲ್ಲಿ ಕೂರಿಸಿ ಬಂದಾಗ ಎರಡು ನಾಯಿಗಳು ಬಂದವಂತೆ. ಹೆದರಿದ ಆಕೆ ನನ್ನ ಹಿಂದೆಯೇ ಓಡಿ ಬಂದಳಂತೆ. ಆಟೋ ಮಾಮ ಕರೆದು ಆಟೋದಲ್ಲಿ ಕೂರಿಸಿಕೊಂಡರಂತೆ. ಅವರು ಕೊಡಿಸಿದ ತಿಂಡಿ ತಿನ್ನುತ್ತಾ ಪಪ್ಪಾ ಬರ್ತಾರಂತ ಕಾದಳಂತೆ. ತಿಂಡಿ ಮುಗಿದು ತಡವಾಗಲು ಅತ್ತಳಂತೆ. ಡ್ರೈವರ್ ಅಂಕಲ್ ಅಡ್ರೆಸ್ ಕೇಳಿದಾಗ ಮನೆ ದಿಕ್ಕು ತೋರಿಸಿದಳಂತೆ. ಕೊನೆಗೆ ನಾವು ಕಂಡೆವಂತೆ.

ಊರೆಲ್ಲಾ ಹುಡುಕಾಡಿದ ನಾನು ಅಲ್ಲೇ ರಸ್ತೆ ಬದಿಯಲ್ಲಿದ್ದ ಆಟೋ ಇಣುಕಿ ನೋಡಿದ್ದರೆ, ಒಂದು ಸಲ ವಿಚಾರಿಸಿದ್ದರೆ ಮಗಳು ಸಿಕ್ಕೇ ಬಿಟ್ಟಿರುತ್ತಿದ್ದಳು. ಸಿಕ್ಕಿದ್ದರೆ ಈ ಅನುಭವ ಹೇಳಿ ತಲೆ ತಿನ್ನುವುದೂ ತಪ್ಪುತ್ತಿತ್ತು. ಬದುಕಲ್ಲಿ ಆಕಸ್ಮಿಕವಾಗಿ ನಡೆಯುವ ಇಂಥ ಘಟನೆಗಳು ಎಷ್ಟೊಂದು ಪಾಠ ಕಲಿಸುತ್ತವೆ. ನನ್ನ ಬದುಕಿನ ಕೇವಲ ಒಂದು ಗಂಟೆಯ ಅವಧಿ ಅದೆಷ್ಟೋ ಜನರ ಪ್ರಶ್ನೆಗಳಿಗೆ, ಕೆಲವರ ವಿಚಿತ್ರ ವರ್ತನೆಗಳಿಗೆ, ಕಂಡೂ ಕಾಣದ ಮಾನವೀಯ ತುಡಿತಗಳಿಗೆ, ಅಪ್ಪನೆಂಬ ಜವಾಬ್ದಾರಿಗೆ ಹೊಸರೂಪ, ಹೊಸ ಭಾಷೆ ಕೊಟ್ಟಿತು.

### ಕಲೀಮ್ ಉಲ್ಲಾ

ಚಿಕ್ಕಮಗಳೂರು ಜಿಲ್ಲೆಯ ತರೀಕೆರೆಯವರಾದ ಕಲೀಮ್ ಕತೆ, ಪ್ರಬಂಧ, ಅಂಕಣ ಬರಹಗಳಿಂದ ಗುರುತಿಸಿಕೊಂಡಿದ್ದಾರೆ. 'ಪ್ರಜಾವಾಣಿ'ಯ 'ಕಾಮನಬಿಲ್ಲು' ಪುರವಣಿಯಲ್ಲಿ ಈ ಹಿಂದೆ ಅವರ 'ಕ್ಲಾಸ್‌ಟೀಚರ್' ಎಂಬ ಅಂಕಣ ಪ್ರಕಟವಾಗಿತ್ತು. ಈ ಅಂಕಣ ಅದೇ ಹೆಸರಿನಲ್ಲಿ ಪುಸ್ತಕ ರೂಪದಲ್ಲಿ ಪ್ರಕಟವಾಗಿದೆ. ಪ್ರಸ್ತುತ ಅವರು ಶಿವಮೊಗ್ಗದಲ್ಲಿ ಕನ್ನಡ ಅಧ್ಯಾಪಕರು.